**ಸಾಕ್ಷಿಗೆ ದಿನಾಂಕ 28.07.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ.ಎನ್ ಎಂ ಪಿ ವಕೀಲರಿಂದ:**

1. ದೂರನ್ನು ನನ್ನ ಮಗ ನೀಡಿರುತ್ತಾನೆ. ಅಪಘಾತವಾದ ಮಾರನೇ ದಿನ ದೂರು ನೀಡಿರುತ್ತಾನೆ. ದೂರಿನಲ್ಲಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮಗ ಅಪಘಾತದ ದಿನ ನನ ಜೊತೆ ಇರಲಿಲ್ಲ. ನನ್ನ ಮಗನನ್ನು ಅಪಘಾತದ ನಂತರ ಯಾರು ಕರೆಸಿದರು ಎಂದು ನನಗೆ ಗೊತ್ತಿಲ್ಲ. ಅಪಘಾತದ ವಿಚಾರ ಅಲ್ಲಿದ್ದವರು ನನ್ನ ಮಗನಿಗೆ ಹೇಳಿರುತ್ತಾರೆ. ನನ್ನ ಮಗ ಅಲ್ಲಿದ್ದವರನ್ನು ವಿಚಾರಿಸಿಯೇ ದೂರು ನೀಡಿರುತ್ತಾರೆ ಎಂದರೆ ಸರಿ. ನನಗೆ ಜ್ಞಾನ ಬಂದಾಗ ಆಸ್ಪತ್ರೆಯಲ್ಲಿ ನನ್ನ ಜೊತೆ ಇದ್ದನು. ಆಸ್ಪತ್ರೆಯಲ್ಲಿ ನನ್ನ ಮಗ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತಾನೆ. ಸದರಿ ಹೇಳಿಕೆಯಲ್ಲಿ ವಾಹನದ ಸಂಖ್ಯೆ ಹೇಳಿರುವುದಿಲ್ಲ ಎಂದರೆ ಅದರ ನಂತರ ಸಿಸಿಟಿವಿ ದೃಶ್ಯಾವಳಿ ನೋಡಿ ವಾಹನದ ಸಂಖ್ಯೆ ಹೇಳಲಾಗಿದೆ. ಸಿಸಿಟಿವಿಯ ದೃಶ್ಯಾವಳಿಯನ್ನು ಯಾವಾಗ ನೋಡಲಾಗಿದೆ ಎಂದು ನನಗೆ ಗೊತ್ತಿಲ್ಲ.

2. ಒಂದು ದಿನ ತಡವಾಗಿ ನೀಡಿದ ದೂರನಲ್ಲಿಯೂ ಸಹ ಯಾವುದೋ ಒಂದು ವಾಹನ ಅಪಘಾತಪಡಿಸಿ ಹೋಗಿದೆ ಎಂದು ನಮೂದಿಸಿದೆ ಎಂದರೆ ನನಗೆ ಗೊತ್ತಿಲ್ಲ. ಪರಿಹಾರ ಅರ್ಜಿಯಲ್ಲಿ ಒಂದನೇ ಎದುರುದಾರರ ವಾಹನದ ಸಂಖ್ಯೆಯನ್ನು ಯಾರು ನೀಡಿರುತ್ತಾರೆ ಎಂದರೆ ನನ್ನ ಮಗನಿಗೆ ಗೊತ್ತು. ಆಪಾದಿತ ವಾಹನ ಯಾರಿಗೆ ಸೇರಿದ್ದು ಎಂದು ನನ್ನ ಮಗನಿಗೆ ಗೊತ್ತು. ಆಪಾದಿತ ವಾಹನದ ಮಾಲೀಕರು ನನ್ನ ಮಗನಿಗೆ ಪರಿಚಯ ಇರುವುದಿಲ್ಲ. ಸಿಸಿಟಿವಿಯ ದೃಶ್ಯಾವಳಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**